ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1197 (1356)
ಉತ್ತರಿಸುವ ದಿನಾಂಕ	18-03-2020
ಮಾನ್ಯ ಸದಸ್ಯರ ಹೆಸರು	ಶ್ರೀ ಆರ್ ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ)
ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ	ಕಂದಾಯ ನಿವೇಶನ ಎಂದರೇನು; ಕಾನೂನಿನಲ್ಲಿ ಇವುಗಳಿಗಿರುವ ಮಾನ್ಯತೆ ಏನು; (ವಿವರವಾದ ಮಾಹಿತಿ ನೀಡುವುದು)	ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ ಅಧಿನಿಯಮ 1991ರ ಸೆಕ್ಷನ್ 2(5)ರ ಪ್ರಕಾರ "ಕಂದಾಯ ನಿವೇಶನ ಎಂದರೆ" ಕರ್ನಾಟಕ ಭೂ-ಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12)ರ 95ನೇ ಪ್ರಕರಣಕ್ಕೆ ಅನುಸಾರವಾಗಿ ಪರಿವರ್ತಿತವಾಗಿರದ ಭೂಮಿಯ ಮೇಲೆ ಪಟ್ಟಣ ಅಥವಾ ಗ್ರಾಮಾಂತರ ಯೋಜನೆಗೆ ಅಥವಾ ಕಟ್ಟಡಗಳ ನಿರ್ಮಾಣಕ್ಕೆ ಸಂಬಂಧಪಟ್ಟ ಸುಸಂಗತ ಕಾನೂನಿನ ಅಡಿಯಲ್ಲಿ ಅನುಮೋದನೆಯಿಲ್ಲದೆ ರೂಪುಗೊಂಡ ಒಂದು ನಿವೇಶನ. ಸದರಿ ಕಂದಾಯ ನಿವೇಶನಗಳು ಅನಧಿಕೃತ (illegal) ನಿವೇಶನಗಳಾಗಿರುತ್ತವೆ.
ಆ	ರಾಜ್ಯದಲ್ಲಿ ಕಂದಾಯ ನಿವೇಶನಗಳ ನೋಂದಾವಣೆಯನ್ನು ಸ್ಥಗಿತಗೊಳಿಸಿರುವುದು ನಿಜವೇ; ಹಾಗಿದ್ದರೆ, ಸ್ಥಗಿತಗೊಳಿಸಲು ಕಾರಣಗಳೇನು;	ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 344 ಮುನೋಮು 2008 ದಿನಾಂಕ: 06-04-2009 ರಂತೆ ನಿವೇಶನಗಳ ನೋಂದಣಿಗೆ ನಿಗದಿಪಡಿಸಿರುವ ಅಗತ್ಯವಾದ ದಾಖಲೆಗಳನ್ನು ಪಕ್ಷಕಾರರು ದಸ್ತಾವೇಜುಗಳ ನೋಂದಣಿ ಸಮಯದಲ್ಲಿ ಹಾಜರುಪಡಿಸಿದಲ್ಲಿ ಅಂತಹ ದಸ್ತಾವೇಜುಗಳನ್ನು ನೋಂದಾಯಿಸಲಾಗುತ್ತಿದೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸ್ವತ್ತುಗಳಿಗೆ ಸಂಬಂಧಿಸಿದ ದಸ್ತಾವೇಜುಗಳನ್ನು ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 06 ಮುನೋಮು 2013, ದಿನಾಂಕ:18-07-2014ರಲ್ಲಿ ನಿಗದಿಪಡಿಸಿರುವ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸ್ವತ್ತುಗಳಿಗಾಗಿ ಇರುವ ಇ-ಸ್ವತ್ತು ತಂತ್ರಾಂಶದಿಂದ ಮಾಹಿತಿಯನ್ನು ಪಡೆದು ನೋಂದಾಯಿಸಲಾಗುತ್ತಿದೆ.
ಇ	ಸ್ಥಗಿತಗೊಳಿಸಿರುವ ಕಂದಾಯ ನಿವೇಶನಗಳ ನೋಂದಣಿಯನ್ನು ಪ್ರಾರಂಭಿಸುವುದು ಯಾವಾಗ;	
ಈ	ಕಂದಾಯ ನಿವೇಶನಗಳನ್ನು ನೋಂದಣಿ ಮಾಡಿಸಲು ಹಾಲಿ ಇರುವ ಮಾರ್ಗಸೂಚಿ ಹಾಗೂ ಷರತ್ತುಗಳೇನು?	

ಸಂಖ್ಯೆ: ಕಂಇ-ಎಂಎನ್ಎಸ್ಎ-46/2020

(ಆರ್ ಅಶೋಕ್)
ಕಂದಾಯ ಸಚಿವರು

6. ಮಂಜೂರಾದ ಜಮೀನು 1969ರ ಕರ್ನಾಟಕ ಭೂ ಮಂಜೂರಾತಿ ನಿಯಮಗಳಿಗೆ ಬದ್ಧವಾಗಿದ್ದು, ಸದರಿ ನಿಯಮಗಳ ಉಲ್ಲಂಘನೆಯಾದಲ್ಲಿ ನಿಯಮಾನುಸಾರ ಯಾವುದೇ ಪರಿಹಾರ ನೀಡದೆ ಮಂಜೂರಾತಿಯನ್ನು ರದ್ದುಗೊಳಿಸಲಾಗುವುದು ಹಾಗೂ ಜಮೀನನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

7. ಜಿಲ್ಲಾಧಿಕಾರಿಗಳು ಮಂಜೂರಾದ ಜಮೀನನ್ನು ಫಲಾನುಭವಿಗೆ ಹಸ್ತಾಂತರಿಸುವಾಗ ಮಂಜೂರಾದ ಪ್ರದೇಶದ ವಾಸ್ತವ ಪರಿಸ್ಥಿತಿಗಳನ್ನು ಗಮನದಲ್ಲಿಟ್ಟುಕೊಂಡು ಪೂರಕವಾದ ಷರತ್ತುಗಳನ್ನು ವಿಧಿಸಬಹುದಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಸ್.ಎಲ್.ಮಹಾಂತೇಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ(ಭೂಮಂಜೂರಾತಿ-1).

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ಬೆಂಗಳೂರು ಇವರನ್ನು ಇದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ 50 ಪ್ರತಿಗಳನ್ನು ಕಂದಾಯ ಇಲಾಖೆಗೆ ಕಳುಹಿಸುವಂತೆ ಕೋರಿದೆ.

ಇವರಿಗೆ:

1. ಮಹಾಲೇಖಪಾಲರು (ಎ & ಇ ಲೆಕ್ಕಪರಿಶೋಧನೆ-1, ಲೆಕ್ಕ ಪರಿಶೋಧನೆ-2) ಬೆಂಗಳೂರು.
2. ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು.
3. ಜಿಲ್ಲಾಧಿಕಾರಿ, ರಾಮನಗರ ಜಿಲ್ಲೆ, ರಾಮನಗರ.
4. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಚಿವ ಸಂಪುಟ(ಸಿ.147/2018), ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-7), ವಿಧಾನಸೌಧ, ಬೆಂಗಳೂರು.
6. ಅಧ್ಯಕ್ಷರು, ಹಾರೋಬೆಲೆ ಕಪಾಲಬೆಟ್ಟ ಅಭಿವೃದ್ಧಿ ಟ್ರಸ್ಟ್(ರಿ), ಹಾರೋಬೆಲೆ ಅಂಚೆ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.
7. ಸರ್ಕಾರದ ಉಪ ಕಾರ್ಯದರ್ಶಿ, ಕಂದಾಯ ಇಲಾಖೆ,(ಸಮನ್ವಯ) ಬಹುಮಹಡಿ ಕಟ್ಟಡ ಬೆಂಗಳೂರು ಇವರಿಗೆ ಕಾಂಪೆಂಡಿಯಂನಲ್ಲಿ ಸೇರ್ಪಡೆ ಮಾಡಲು ಕಳುಹಿಸಿದೆ.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

<u>ಪ್ರತಿಯನ್ನು:</u>

1. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕ, ಕಂದಾಯ ಇಲಾಖೆ (ಭೂ ಮಂಜೂರಾತಿ), ಬಹುಮಹಡಿ ಕಟ್ಟಡ, ಬೆಂಗಳೂರು.